ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :–

(ಅ) ಹೌದು.

(ಆ) ಸರ್ಕಾರದ ಆದೇಶ ಸಂಖ್ಯೆ : ಅಪಜೀ 143 ಎಫ್‌ಡಬ್ಲ್ಯೂಎಲ್ 2010, ಬೆಂಗಳೂರು ದಿನಾಂಕ : 3/8/2011 ರಂತೆ ಮೃತರ ವಾರಸುದಾರರಾದ ಮೃತರ ಪತ್ನಿ ಶ್ರೀಮತಿ ಸಾವಿತ್ರಮ್ಮ ಕೋಂ ದಿವಂಗತ ಕೆ. ಶಿವರಾಜು ಬಿನ್ ಮರಿಚಿಕ್ಕರಡೀಗೌಡ ಇವರಿಗೆ ರೂ. 5,00,000/– ಗಳ ದಯಾತ್ಮಕಧನವನ್ನು ನೀಡಲಾಗಿದೆ.

(ಇ) ಇತ್ತೀಚಿನ ದಿನಗಳಲ್ಲಿ ಹವಾಮಾನದ ವ್ಯತಿರಿಕ್ತದಿಂದ ಹಾಗೂ ವಲಯ ಪ್ರದೇಶದ ಮೇಲೆ ಜೈವಿಕ ಒತ್ತಡ, ವಲಯ ಪ್ರದೇಶದ ಭೂ ಉಪಯೋಗಿಸುವಿಕೆ ವಿಧಾನದಲ್ಲಿ ಬದಲಾವಣೆಯಿಂದ ಕಾಡಿನಿಂದ ಆಹಾರ ಹಾಗೂ ನೀರು ಹುಡುಕಿಕೊಂಡು ಕಾಡು ಪ್ರಾಣಿಗಳು ನಾಡಿಗೆ ಬರುತ್ತಿವೆ.

(ಈ) ಮಾನವ–ವನ್ಯಪ್ರಾಣಿ ಸಂಘರ್ಷ ತಪ್ಪಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿ ಅರಣ್ಯ ಅಧಿಕಾರಿಗಳ ಉದಾಸೀನತೆ ಕಂಡುಬರುವುದಿಲ್ಲ.

(ಉ) ಚಿರತೆಯು ಕಂಡ ಸ್ಥಳಗಳಲ್ಲಿ ಕೂಡಲೇ ವಲಯ ಅರಣ್ಯಾಧಿಕಾರಿಗಳ ಮತ್ತು ಕ್ಷೇತ್ರ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿ ಅಲ್ಲಲ್ಲಿ ಪಂಜರಗಳನ್ನು (Cage) ಇಟ್ಟು ಪೊಲೀಸ್ ಸಹಾಯವನ್ನು ಪಡೆದು ಹಗಲು ರಾತ್ರಿ ಇಲಾಖಾ ವಾಹನಗಳನ್ನು ಗಸ್ತು ಮಾಡುತ್ತಿರುತ್ತಾರೆ ಹಾಗೂ ಚಿರತೆಯು ಇರುವ ಸ್ಥಳಗಳಲ್ಲಿ ಚಿರತೆಯು ಓಡಾಡುವುದನ್ನು ಪತ್ತೆ ಮಾಡಲು ಕ್ಯಾಮರಾ ಟ್ರಾಪ್ಸ್‌ಗಳನ್ನು ಅಲ್ಲಲ್ಲಿ ಅಳವಡಿಸಲಾಗಿದೆ ಹಾಗೂ ಚಿರತೆಯನ್ನು ಸೆರೆಯಿಡಿಯಲು ಮತ್ತು ಬರಿಸುವ ಔಷಧ ನೀಡಲು ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಚಿರತೆಯನ್ನು ಸೆರೆಹಿಡಿಯಲು ಕಾರ್ಯಾಚರಣೆ ನಡೆಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಬಂಡೀಪುರ ವನ್ಯಜೀವಿ ವಿಭಾಗದಿಂದ ಕರೆಸಿರುವ 10 ಜನ ಎಸ್‌ಟಿಎಫ್‌ರವರ ನೆರವಿನೊಂದಿಗೆ ಹಳ್ಳಿ ಹಳ್ಳಿಗಳಲ್ಲಿ ಗಸ್ತು ಮಾಡಲಾಗಿದೆ. ಹಾಗೆಯೇ ಸರ್ಕಾರೇತರ ಸಂಸ್ಥೆ (ಎನ್‌ಜಿಓ) ಮತ್ತು ಸ್ಥಳೀಯ ರೈತ ಮುಖಂಡರ ಸಹಭಾಗಿತ್ವದಲ್ಲಿ ಕಾರ್ಯ ರೂಪಿಸಲಾಗಿದ್ದು, ಇದರಿಂದ ಜನರ ಭಯಬೀತಿ ದೂರವಾಗಿದೆ.

ತಹಶೀಲ್ದಾರ್ ಅಕ್ರಮ

47 (108) ಶ್ರೀ ರಾಜೀವ್ ಪಿ. (ಕುಡಚಿ) :– ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕು ತಹಶೀಲ್ದಾರರ ಕಛೇರಿಯಲ್ಲಿ ನಕಲಿ ಚಲನ್ ಸೃಷ್ಟಿಸಿ ಹಣ ಪಡೆದು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದೇ ತಾಲ್ಲೂಕಿನ ನಸಲಾಪುರದ ಸರ್ವೆ ನಂ. 67ರಲ್ಲಿ 44.11 ಎಕರೆ ಹಾಗೂ 68ರಲ್ಲಿ 44.22 ಎಕರೆ ಮರಡಿ ಗ್ರಾಮದ ಸರ್ವೆ ನಂ. 23 ರಲ್ಲಿ 26 ಎಕರೆ 1 ಗುಂಟೆ ಸರ್ಕಾರಿ ಗೋಮಾಳವನ್ನು ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬರಪೀಡಿತ ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆಯಲ್ಲಿ ಖೊಟ್ಟಿ ದಾಖಲೆ ಸೃಷ್ಟಿಸಿ ಲಕ್ಷಾಂತರ ರೂಪಾಯಿಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇದಕ್ಕೆ ಕಾರಣರಾದ ತಹಶೀಲ್ದಾರ್ ಮತ್ತು ಸಿಬ್ಬಂದಿಯ ಮೇಲೆ ಮತ್ತು ನೀರು ಪೂರೈಕೆಯ ವಾಹನಗಳ ನಕಲಿ ಬಿಲ್ ನೀಡಿದ ಗುತ್ತಿಗೆದಾರರ ಮೇಲೆ ಸರ್ಕಾರದ ಸೂಕ್ತ ಕ್ರಮವೇನು ? (ವಿವರ ನೀಡುವುದು)

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು) :–

(ಅ) ಹೌದು.

(ಆ) ಹೌದು.

(ಇ) ಹೌದು.

(ಈ) ಬೆಳಗಾಂ ಜಿಲ್ಲಾಧಿಕಾರಿಗಳ ವರದಿಯನ್ನಾಧರಿಸಿ ರಾಯಭಾಗ ತಾಲ್ಲೂಕಿನ ತಹಶೀಲ್ದಾರರಾದ ಶ್ರೀ ಶಿವಾನಂದ ಪಿ. ಸಾಗರಿವರು ನೀರು ಪೂರೈಕೆಯ ವಾಹನಗಳ ನಕಲಿ ಬಿಲ್ಲಿನ ಮೇಲೆ ಹಣ ಬಿಡುಗಡೆ ಮಾಡಲು ಕಾರಣರಾಗಿದ್ದಾರೆಂಬ ಆರೋಪದ ಮೇಲೆ ಸರ್ಕಾರದ ಆದೇಶ ಸಂ : ಆರ್‌ಡಿ 53 ಎಡಿಇ 2014, ದಿನಾಂಕ : 13–06–2014 ರಲ್ಲಿ ವಿಚಾರಣೆ ಕಾಯ್ದಿರಿಸಿ ಅಮಾನತ್ತಿನಲ್ಲಿಡಲಾಗಿದೆ.

ಪ್ರಾದೇಶಿಕ ಆಯುಕ್ತರು ಬೆಳಗಾವಿ ವಿಭಾಗ, ಇವರ ಆದೇಶ ದಿ : 30–05–2014 ರಲ್ಲಿ ಶ್ರೀ ಎನ್.ವಿ. ಗೆಜ್ಜಿ, ಹಿಂದಿನ ಕಂದಾಯ ವೀಕ್ಷಕರು, ರಾಯಭಾಗ ಪ್ರಸ್ತುತ ಉಪ ತಹಶೀಲ್ದಾರ್, ನಾಡಕಛೇರಿ, ಗುಂಜಿ ತಾಲ್ಲೂಕು, ಖಾನಾಪುರ ಇವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ. ಹಾಗೂ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆನ್ನಲಾದ 11 ನೌಕರರ ಪೈಕಿ (03 ಮಂದಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನೊಳಗೊಂಡಂತೆ) 8 ಮಂದಿ ಕಂದಾಯ ಇಲಾಖೆಯ ನೌಕರರುಗಳನ್ನು ಅಮಾನತ್ತುಗೊಳಿಸಿ ಆದೇಶಿಸಲಾಗಿದೆ ;

ನೀರು ಪೂರೈಕೆಯ ವಾಹನಗಳ ನಕಲಿ ಬಿಲ್ಲು ನೀಡಿದ ಗುತ್ತಿಗೆದಾರರ ಮೇಲೆ ನಿಯಮಾನುಸಾರ ಕ್ರಮ ಜರುಗಿಸಲು ರಾಯಭಾಗ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಲಾಗಿದೆ.